ಸೇತುವೆ	ಗುತ್ತಿಗೆ ಮೊತ್ತ.
೧. ಮಾದಾಪುರ	ರೂ. ೧೭೦.೦೦ ಲಕ್ಷಗಳು
೨. ಹಟ್ಟಿಹೊಳೆ	ರೂ. ೨೦೦.೦೦
೩. ಕುಶಾಲನಗರ	ರೂ. ೪೦೦.೦೦

ಈ ಸೇತುವೆ ಕಾರ್ಯಗಳು ಪ್ರಗತಿಯಲ್ಲಿ ಇದ್ದು, ಡಿಸೆಂಬರ್ 2001 ರಲ್ಲಿ ಪೂರ್ಣಗೊಳ್ಳುತ್ತವೆ.

ಇ) ಜಲಾಶಯಕ್ಕೆ ಒಳಹರಿವು ಹೆಚ್ಚಾಗಿ ಕಾಮಗಾರಿಯ ಸ್ಥಳದಲ್ಲಿ ಹಿನ್ನೀರು ನಿಂತಿರುವ ಕಾರಣ ಜೂನ್ 2001 ದಿಂದ ಕಾಮಗಾರಿಯನ್ನು ಮುಂದುವರಿಸಲಾಗುತ್ತಿಲ್ಲ, ಕಾಮಗಾರಿಯನ್ನು ಮಾರ್ಚ್ 2003 ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿನ ಕಾರ್ಮಿಕ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಿರುವ ಕಾರ್ಮಿಕ ಮಾಧ್ಯಮಗಳು.

2185(2707) ಶ್ರೀ ಅಪ್ಪಚ್ಚು ರಂಜನ್ ಎಂ. (ಸೋಮವಾರಪೇಟೆ) :— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಕಾರ್ಮಿಕ ನ್ಯಾಯಾಲಯಗಳಿವೆ?

ಆ) ರಾಜ್ಯದಲ್ಲಿ ಎಷ್ಟು ಕಾರ್ಮಿಕ ಮೊಕದ್ದಮೆಗಳು ದಾಖಲಾಗಿವೆ, ಎಷ್ಟು ಇತ್ಯರ್ಥವಾಗಿವೆ?

ಇ) ಕೊಡಗು ಜಿಲ್ಲೆಯಲ್ಲಿ ಎಷ್ಟು ದಾಖಲಾಗಿವೆ ಹಾಗೂ ಎಷ್ಟು ಇತ್ಯರ್ಥವಾಗಿವೆ? (ತಾಲ್ಲೂಕುವಾರು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :—

ಅ) 16.

ಆ) 1998,99 ಮತ್ತು 2000ರ ಅವಧಿಯಲ್ಲಿ ಮೊಕದ್ದಮೆ ಹೂಡಿರುವ ಹಾಗೂ ಇತ್ಯರ್ಥಗೊಂಡಿರುವ ಪ್ರಕರಣಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಮಡಿಕೇರಿ ಕಾರ್ಮಿಕರ ನ್ಯಾಯಾಲಯದಲ್ಲಿ ದಿನಾಂಕ: 31-12-2000ದಲ್ಲಿ 27 ಪ್ರಕರಣಗಳು ದಾಖಲಾಗಿದ್ದು ಹಾಗೂ ದಿನಾಂಕ: 01-01-2001 ರಿಂದ 30-01-2001ಕ್ಕೆ 18 ಪ್ರಕರಣಗಳು ದಾಖಲಾಗಿದೆ. ಒಟ್ಟು 45 ಪ್ರಕರಣಗಳಲ್ಲಿ, 9 ಪ್ರಕರಣಗಳು ಇತ್ಯರ್ಥವಾಗಿದ್ದು, 36 ಪ್ರಕರಣಗಳು ಬಾಕಿ ಇವೆ.

1998-99, 1999-2000, 2000-01 ರಲ್ಲಿ ಮೊಕದ್ದಮೆ ಹೂಡಿರುವ ಹಾಗೂ ಇತ್ಯರ್ಥಗೊಂಡಿರುವ ಪ್ರಕರಣಗಳ ಪಟ್ಟಿ - ಅನುಬಂಧ

ನ್ಯಾಯಾಲಯದ ಹೆಸರು	ಇನ್ಸ್ಟಿಟ್ಯೂಷನ್			ವಿಲೇವಾರಿ		
	1998	1999	2000	1998	1999	2000
1. ಕಾರ್ಮಿಕ ನ್ಯಾಯಾಲಯ, ಬೆಂಗಳೂರು	346	530	350	320	514	596
2. 1ನೇ ಹೆಚ್ಚುವರಿ ಕಾರ್ಮಿಕ ನ್ಯಾಯಾಲಯ, ಬೆಂಗಳೂರು	254	322	213	434	136	79
3. 2ನೇ -"-	292	367	343	122	259	180
4. 3ನೇ -"-	236	418	353	112	303	209
5. ಇಂಡಸ್ಟ್ರೀಯಲ್ ಟ್ರಿಬ್ಯೂನಲ್, ಬೆಂಗಳೂರು	87	326	253	99	189	203
6. ಹೆಚ್ಚುವರಿ --"--	111	133	97	238	216	121
7. ಕಾರ್ಮಿಕ ನ್ಯಾಯಾಲಯ, ಚಿಕ್ಕಮಗಳೂರು	327	352	304	224	151	320
8. --"-- ಮೈಸೂರು	515	545	532	266	137	511
9. ಇಂಡಸ್ಟ್ರೀಯಲ್ ಟ್ರಿಬ್ಯೂನಲ್, ಮೈಸೂರು	138	103	99	62	82	119
10. ಕಾರ್ಮಿಕ ನ್ಯಾಯಾಲಯ, ಗುಲ್ಬರ್ಗಾ	624	722	873	451	545	324
11. --"-- ಕೊಡಗು	94	279	56	111	121	90
12. --"-- ಬಿಜಾಪುರ	223	361	324	238	194	182
13. --"-- ದಕ್ಷಿಣ ಕನ್ನಡ	162	139	175	160	170	465
14. --"-- ಹುಬ್ಬಳ್ಳಿ	586	496	333	828	383	297
15. ಹೆಚ್ಚುವರಿ ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ	546	442	460	461	147	404
16. ಇಂಡಸ್ಟ್ರೀಯಲ್ ಟ್ರಿಬ್ಯೂನಲ್, ಹುಬ್ಬಳ್ಳಿ	98	65	95	139	140	155
ಒಟ್ಟು	4639	5,000	4,875	4,255	3,670	4,255